

ಡಾ. ಎಸ್. ರಾಮಮೂರ್ತಿ

# 1-6-2017ರಿಂದ 7-6-2017ರವರೆಗೆ




ಕೆಲಸ ಕಾರ್ಯಗಳು ನಿರೀಕ್ಷೆಯಂತೆ ನಡೆದು ಸಂತಸವಾಗುವುದು. ಕ್ರಯ ವಿಕ್ರಯ ಒಪ್ಪಂದ ವ್ಯವಹಾರಗಳಲ್ಲಿ ಪೈಪೋಟಿಯಿದ್ದರೂ ಸೂಕ್ತ ಲಾಭ ದೊರೆಕುವುದು. ಹಿಂದಿನ ಕೆಲವು ಸಮಸ್ಯೆಗಳಿಗೆ ಹಿರಿಯರಿಂದ ಪರಿಹಾರಗಳು ಲಭಿಸುವುದು. ಅಧ್ಯಯನದಲ್ಲಿ ಆಸಕ್ತಿ ಹೆಚ್ಚುವುದು. ವಿವಾದಗಳಲ್ಲಿ ಗೌರವ ಪ್ರಾಪ್ತಿಯಾಗುವುದು. ಶುಭ ದಿನ: 4; ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಏನಾದರೊಂದು ಚಿಂತೆ. ಸಣ್ಣಪುಟ್ಟ ಪೆಟ್ಟಾಗುವ ಸಂಭವ. ಕೆಲಸ ಕಾರ್ಯಗಳಲ್ಲಿ ಹಿನ್ನಡೆ. ವಿಪರೀತ ಖರ್ಚು, ಅನಾರೋಗ್ಯ. ವಾರದ ಮಧ್ಯಭಾಗದಿಂದ ಚೇತರಿಕೆ. ಆತ್ಮವಿಶ್ವಾಸ ಹೆಚ್ಚುವುದು. ವೃತ್ತಿ ವ್ಯವಹಾರಗಳಲ್ಲಿ ಪ್ರಗತಿ ಆತ್ಮೀಯರ ಆಗಮನ. ಪ್ರಯಾಣ ಸೌಖ್ಯ. ಗಣ್ಯರಿಂದ ಪ್ರಶಂಸೆ. ಶುಭ ದಿನ: 5; ಗಣಪತಿ ಮತ್ತು ಲಕ್ಷ್ಮೀ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಸೌಖ್ಯ. ಪತ್ರಾಗಮನ. ಪ್ರೀತಿ ಪಾತ್ರರ ಭೇಟಿ. ಕಾರ್ಯ ಕಲಾಪಗಳಲ್ಲಿ ಸಫಲತೆ. ಲೇವಾದೇವಿಗಳಲ್ಲಿ ಲಾಭ. ವಾರದ ಮಧ್ಯಭಾಗದಲ್ಲಿ ಒತ್ತಡ. ವಾಹನಗಳಿಂದ ತೊಂದರೆ. ಆರೋಗ್ಯ ವ್ಯತ್ಯಯ. ಕುಟುಂಬ ಸದಸ್ಯರಲ್ಲಿ ಕಲಹ ಸಂಭವ. ಉದ್ಯೋಗದಲ್ಲಿ ಅಶಾಂತಿ. ಅಹಿತ ಸುದ್ದಿ, ವಾರಾಂತ್ಯ ಮುನ್ನಡೆ. ಶುಭ ದಿನ: 2; ಶಿವ ಮತ್ತು ಪಾರ್ವತಿ ಅಷ್ಟೋತ್ತರ ಪಠಿಸಿ




ವಾರದ ಮಧ್ಯಭಾಗದವರೆಗೂ ಅನುಕೂಲ. ಮನೋಬಲ ವೃದ್ಧಿ. ಶ್ರಮವಿಲ್ಲದೆ ಕಾರ್ಯಸಿದ್ಧಿ. ಆಪ್ತರಿಂದ ಸಹಾಯ, ಧನಾಗಮನ. ಸರ್ಕಾರಿ ಸಂಬಂಧ ವ್ಯವಹಾರಗಳಲ್ಲಿ ಸಫಲತೆ. ವ್ಯಾಪಾರ ರಂಗದಲ್ಲಿ ಲಾಭ. ವಿರೋಧಗಳಿಗೆ ಹಿನ್ನಡೆ. ವಾರಾಂತ್ಯ ಚಂಚಲ ಮನಸ್ಸು. ಸೋಮಾರಿತನ, ನಿದ್ರಾಹೀನತೆ. ವೃತ್ತಿ ವಹಿವಾಟಿನಲ್ಲಿ ಹಿನ್ನಡೆ. ಶುಭ ದಿನ: 4; ಗಣಪತಿ ಮತ್ತು ಶಿವ ಅಷ್ಟೋತ್ತರ ಪಠಿಸಿ




ಉದ್ಯೋಗ ವೃತ್ತಿ ವ್ಯವಹಾರಗಳಲ್ಲಿ ಪ್ರಗತಿ. ಅಧಿಕಾರಿ ವರ್ಗದವರಿಂದ ಸಹಾಯ. ಲೇವಾದೇವಿಗಳಲ್ಲಿ ಲಾಭ. ಲೆಕ್ಕಪತ್ರಗಳ ಅನುಮಾನ ಬಗೆಹರಿಯುವುದು, ವಾಹನ ಯಂತ್ರೋಪಕರಣಗಳು ಅಡೆತಡೆಯಿಲ್ಲದೆ ನಡೆಯುವುದು, ದೈವೀಕ ಕ್ಷೇತ್ರಗಳ ದರ್ಶನ ಯೋಜನೆಯಲ್ಲಿ ಮುನ್ನಡೆ. ಶುಭ ದಿನ: 4; ಗಣಪತಿ ಮತ್ತು ಶಿವ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ವಿಪರೀತ ಖರ್ಚು. ಅನಾವಶ್ಯಕ ತಿರುಗಾಟ. ಅಕಾಲ ಭೋಜನ. ವೃತ್ತಿ ವ್ಯವಹಾರಗಳಲ್ಲಿ ಅಶಾಂತಿ. ವಾರದ ಮಧ್ಯಭಾಗದಿಂದ ಅನುಕೂಲ. ಏಕಾಗ್ರತೆ ಹೆಚ್ಚುವುದು, ಆಪ್ತರ ಆಗಮನ. ನಿರೀಕ್ಷೆಯಂತೆ ಕಾರ್ಯ ಸಿದ್ಧಿ. ಲೇವಾ ದೇವಿಗಳಲ್ಲಿ ಲಾಭ. ಪ್ರಯಾಣ ಸೌಖ್ಯ. ಗೌರವ ಪ್ರಾಪ್ತಿ. ಶುಭ ದಿನ: 5; ದುರ್ಗಾ ಮತ್ತು ಗುರು ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಮನಃಶಾಂತಿ. ಶ್ರಮವಿಲ್ಲದೆ ಕಾರ್ಯ ಸಾಧನೆ. ಲೇವಾದೇವಿಗಳಲ್ಲಿ ಲಾಭ. ಆಪ್ತರ ಆಗಮನ. ಹಿತಸುದ್ದಿ. ವಾರದ ಮಧ್ಯಭಾಗದಲ್ಲಿ ಆತಂಕ. ಕೋಪ ಹೆಚ್ಚಾಗುವುದು. ಉದ್ಯೋಗದಲ್ಲಿ ಅಸಮಾಧಾನ. ಹಿರಿಯರ ಮೇಲೆ ಕೋಪ ತಾಪ. ವ್ಯಾಪಾರದಲ್ಲಿ ಹಿನ್ನಡೆ. ಆರೋಗ್ಯ ವ್ಯತ್ಯಯ. ವಾರಾಂತ್ಯ ಮುನ್ನಡೆ. ಶುಭ ದಿನ: 2; ಶಿವ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ




ವಾರದ ಮಧ್ಯಭಾಗದವರೆಗೂ ಸುಖ ಸೌಖ್ಯ. ನಿರೀಕ್ಷೆಯಂತೆ ಕೆಲಸ ಕಾರ್ಯ ಸಫಲತೆ. ವ್ಯಾಪಾರದಲ್ಲಿ ಲಾಭ ವೃದ್ಧಿ. ಬರಬೇಕಾದ ಹಣ ಬರುವುದು. ವಾಹನ ಯಂತ್ರೋಪಕರಣಗಳು ಸರಾಗವಾಗಿ ನಡೆಯುವುದು. ದೈವೀಕ ಕಾರ್ಯಗಳಿಗೆ ಪ್ರೋತ್ಸಾಹ ದೊರೆಯುವುದು. ವಾರಾಂತ್ಯ ಬೇಸರ. ಆರೋಗ್ಯ ವ್ಯತ್ಯಯ, ಶತ್ರುಭೀತಿ. ಶುಭ ದಿನ: 4; ಗಣಪತಿ ಮತ್ತು ಗುರು ಅಷ್ಟೋತ್ತರ ಪಠಿಸಿ




ಕೆಲಸ ಕಾರ್ಯಗಳು ನಿರೀಕ್ಷೆಯಂತೆ ನಡೆದು ಸಫಲವಾಗುವುದು. ವ್ಯಾಪಾರ ವಹಿವಾಟುಗಳಲ್ಲಿ ಪೈಪೋಟಿಯಿದ್ದರೂ ಲಾಭ ವೃದ್ಧಿಯಾಗುವುದು. ವಾಹನ ಯಂತ್ರೋಪಕರಣಗಳು ಸುಸ್ಥಿತಿಯಲ್ಲಿರುವುದು. ಕುಟುಂಬ ಸದಸ್ಯರು ಸಹಕಾರ ನೀಡುವರು. ದೇವತಾಕ್ಷೇತ್ರ ದರ್ಶನ ಯೋಜನೆಗಳಲ್ಲಿ ಪ್ರಗತಿ ಕಂಡುಬರುವುದು. ಶುಭ ದಿನ: 2; ಶಿವ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುವುದಿಲ್ಲ. ಕೆಲಸ ಕಾರ್ಯಗಳಲ್ಲಿ ತಪ್ಪುಗಳಾಗುವುದು, ಲೇವಾದೇವಿಗಳಲ್ಲಿ ಹಿನ್ನಡೆ. ಅಕಾಲಭೋಜನ. ವಾರದ ಮಧ್ಯಭಾಗದಿಂದ ಅನುಕೂಲ. ಮನೋಬಲ ಹೆಚ್ಚುವುದು. ವೃತ್ತಿ ವ್ಯವಹಾರಗಳಲ್ಲಿ ಸಮಾಧಾನ. ಆಪ್ತರ ಭೇಟಿ. ಹಿರಿಯರಿಂದ ಸಹಾಯ. ಹಿತಕರ ಸಂದೇಶ. ಶುಭ ದಿನ: 5; ಗಣಪತಿ ಮತ್ತು ಶಿವ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಮನಃಶಾಂತಿ. ಆಟಪಾಠಗಳಲ್ಲಿ ಮೇಲುಗೈ. ವೃತ್ತಿ ವಹಿವಾಟುಗಳಲ್ಲಿ ಸಫಲತೆ. ಗುರುಹಿರಿಯರಿಂದ ಸಲಹೆ. ವಾರದ ಮಧ್ಯಭಾಗದಲ್ಲಿ ಒತ್ತಡ. ವಿಳಂಬ ಸಂದೇಶ. ಕೆಲಸ ಕಾರ್ಯಗಳು ಅರ್ಧಕ್ಕೆ ನಿಲ್ಲುವ ಸಂಭವ. ಕುಟುಂಬ ಸದಸ್ಯರಲ್ಲಿ ಕಲಹ ಸಾಧ್ಯತೆ. ಅನಾವಶ್ಯಕ ತಿರುಗಾಟ. ವಾರಾಂತ್ಯ ಧೈರ್ಯ ಮುನ್ನಡೆ. ಶುಭ ದಿನ: 2; ಗಣಪತಿ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ




ವಾರದ ಮಧ್ಯಭಾಗದವರೆಗೂ ಅನುಕೂಲ, ಅಭಿವೃದ್ಧಿ. ಶ್ರಮವಿಲ್ಲದೆ ಕಾರ್ಯ ಸಾಧನೆ. ಕ್ರಯ ವಿಕ್ರಯಗಳಲ್ಲಿ ಸೂಕ್ತ ಲಾಭ. ಆಪ್ತರಿಂದ ಮಾರ್ಗದರ್ಶನ. ತಕರಾರುಗಳು ಬಗೆಹರಿಯುವುದು. ಕುಟುಂಬದಲ್ಲಿ ಶಾಂತ ವಾತಾವರಣ. ಹಿತ ಸುದ್ದಿ. ವಾರಾಂತ್ಯ ಅಶಾಂತಿ. ವೃತ್ತಿಯಲ್ಲಿ ಒತ್ತಡ. ಶುಭ ದಿನ: 5; ಶಿವ ಮತ್ತು ಸುಬ್ರಹ್ಮಣ್ಯ ಅಷ್ಟೋತ್ತರ ಪಠಿಸಿ